ಕಣ್ಣುಗಳಲ್ಲಿ ತುಂಟತನದಿಂದ ಹೊಳೆವೊಂದು ಬೆಳಕಿತ್ತು. ಆ ಬೆಳಕು ರಾವು ಅವರ ಮನಸಿನಲ್ಲಿ ವಿರುದ್ಧ ಭಾವವನ್ನು ಎಬ್ಬಿಸಿತು. ಅವಳ ವಯಸ್ಸು ಸುಮಾರು ಮೂವತ್ತು ವರ್ಷವಿದ್ದೀತು. ಅಷ್ಟು ಹೊಟ್ಟೆ ತುಂಬಾ ತಿಂದಿದ್ದೂ ಕೊಬ್ಬು ಹತ್ತಿದಂತೆ ಇಲ್ಲದಿದ್ದರೂ, ಹಸಿವೆಯಿಂದ ಸಾಯುತ್ತಿರುವಂತೆ ಮಾತ್ರ ಅವಳು ಕಂಡುಬರುತ್ತಿರಲಿಲ್ಲ. ಆಕೆ ಎಷ್ಟು ಅಸಹಾಯಕತೆ ನಟಿಸಿದರೂ ಅವಳಲ್ಲಿ ಸ್ಥೈರ್ಯವಿತ್ತು.

ತಿರುಪೆ ಬೇಡುವ ಬಗ್ಗೆ ರಾವು ಅವರಿಗೆ ನಿಜಕ್ಕೂ ಸಹಾನುಭೂತಿ ಇರಲಿಲ್ಲ. ಬಡವರೆಂದರೆ, ನಿರ್ಗತಿಯಿಂದ ನೋಯುವವರೆಂದರೆ ಅವರಿಗೆ ಕರುಣೆ ಇರದಿರಲಿಲ್ಲ. ಭಿಕ್ಷೆ ಬೇಡುವುದು ತಪ್ಪೆಂದು ಅವರ ಖಚಿತ ಅಭಿಪ್ರಾಯ. ಆ ಹೆಂಗಸು ಅವರ ಬಳಿಗೆ ಬಂದು ಭಿಕ್ಷೆ ಕೇಳಿದರೆ, ಅವರು ಇನ್ನು ಅನುಮಾನವಿಲ್ಲದಷ್ಟು ಜೋರಾಗಿ ‘ಹೋಗು’ ಅಂದರು. ಅವಳು ಮುಖವನ್ನು ಅದೊಂದು ರೀತಿ ಮಾಡಿ ಇನ್ನೊಂದು ಬದಿಗೆ ತಿರುಗಿದಳು. ಎದುರಿಗೆ ಕುಳಿತಿದ್ದ ಮುದುಕನ ಹತ್ತಿರ ಹೋಗಿ, ಬಾಗಿ ಪಾದಮುಟ್ಟಿದಳು. ಮುದುಕ ಕಾಲನ್ನು ಹಿಂದಕ್ಕೆಳೆದುಕೊಂಡು ವ್ಯಂಗ್ಯವಾಗಿ ನಗುತ್ತಾ, ‘ನಡೆ ನಡೆ’ ಅಂದ.



‘ಹಾಗನ್ನದಿರಿ ತಾತಾ. ಆ ಸ್ವಾಮಿಯಂಥ ಕಲ್ಲು ಹೃದಯ ನಿಮ್ಮದಲ್ಲ. ಆ ಸ್ವಾಮಿಗಳಿಗೆ ಕೊಂಚವೂ ಕರುಣೆಯಿಲ್ಲ. ಹಸಿವೆಯಿಂದ ಸಾಯುತ್ತಿರುವ ಮುಂಡೆ ಭಿಕ್ಷೆ ಕೇಳಿದರೆ ಹೋಗು ಅನ್ನುತ್ತಾರೆ’ ಎಂದಳು.

ತಾನಂದ ‘ಹೋಗು’ ಎಂಬುದನ್ನು ಅನುಕರಿಸಿದ್ದು ಅತಿ ಪೊಗರುತನವೆಂದು ರಾವು ಅವರಿಗನ್ನಿಸಿತು. ಆದರೆ, ಅವರಿಗೆ ಏನು ಹೇಳಲೂ ತೋಚಲಿಲ್ಲ. ಇಷ್ಟವಿಲ್ಲದಿದ್ದರೂ ಅವಳತ್ತ ನೋಡುತ್ತ ಹಾಗೇ ಕುಳಿತರು. ಮುದುಕ ವಿಚಿತ್ರ ಪರಿಸ್ಥಿತಿಗೆ ಸಿಕ್ಕಿದ್ದ. ಅವಳಿಗೆ ಹಣ ಕೊಟ್ಟು ಕಳುಹಿಸುತ್ತಾ, ಬೋಗಿಯಲ್ಲಿದ್ದ ನಾಲ್ವರೂ ಹೊರಕ್ಕೇನೂ ಹೇಳದಿದ್ದರೂ ಹರ್ಷಿಸಿದರೆಂದು ಅವನ ಅನುಮಾನ. ಕೊಡದಿದ್ದರೆ ಆ ತಿರುಕಿ ಹೇಗೆ ಮಾತನಾಡುವಳೋ ಎಂಬ ಭಯ.

ಇದರಲ್ಲಿ ಯಾವುದು ಉತ್ತಮವೋ ಅವನಿಗೆ ತಿಳಿಯಲಿಲ್ಲ. ಕಡೆಗೆ ಇಲ್ಲದ ತೀವ್ರತೆ ತಂದುಕೊಂಡು ಅವಳಿಗೆ ಹೋಗೆಂದ. ಭಿಕ್ಷುಕಿ ಗದ್ದಲಕ್ಕಿಟ್ಟುಕೊಂಡಳು. ‘ಇದರಲ್ಲಿ ಹಣವಿರುವ ದೊರೆಗಳಿರುವರೆಂದು, ನನ್ನಂಥ ತಿರುಕ ಮುಂಡೆಯನ್ನು ಸಾಯಲು ಬಿಡರೆಂದು ಎಷ್ಟೋ ಆಸೆಯಿಂದ ಈ ಡಬ್ಬಿಯೊಳಗೆ ಬಂದೆನೋ ದೇವರೇ! ಇಂದು ಅನ್ನಕ್ಕೆ ಆಗುವಷ್ಟು ಬೇಡಿಕೊಳ್ಳೋಣವೆಂದು ಬಂದೆ. ಎಷ್ಟು ಮೋಸವಾಯಿತೋ ದೇವರೇ! ಮೂರನೇ ಕ್ಲಾಸು ಡಬ್ಬಿಯಲ್ಲಿ ಬಡವರು ಇರುತ್ತಾರೆ. ಈ ಸ್ವಾಮಿಗಳಿಗಿಂತ ಅವರಿಗೇ ಹೆಚ್ಚು ಕರುಣೆ. ನನ್ನ ಕಷ್ಟವೆಲ್ಲ ಅವರಿಗೆ ಗೊತ್ತಾಗುತ್ತೆ. ಹಣವಿರುವ ಸ್ವಾಮಿಗಳೆಲ್ಲ ಕಲ್ಲು ಮನಸ್ಸಿನವರೆಂದು ತಿಳಿದುಕೊಳ್ಳಲಾಗದೆ ಹೋದೆನೊ ದೇವರೇ! ಆಚೆ ಗಾಳಿಮಳೆ. ರೈಲು ಓಡುತ್ತಿದೆ. ಇಲ್ಲಿಂದ ಹೇಗೆ ಹೋಗಲಿ, ಆ ದಯೆಯುಳ್ಳ ಸ್ವಾಮಿಗಳಿರುವ ಜಾಗಕ್ಕೆ?’

ತಿರುಕಿ ಎಲ್ಲರ ದೃಷ್ಟಿಯನ್ನೂ ಸೆಳೆದಳು. ರಾವು ಅವರ ಪಕ್ಕದಲ್ಲಿದ್ದ ಹಿರಿಯ ಪತ್ತೇದಾರಿ ಕಾದಂಬರಿ ಓದುವುದನ್ನು ನಿಲ್ಲಿಸಿದ. ಅವಳತ್ತ ವಿಚಿತ್ರವಾಗಿ ನೋಡಿದ.

‘ಉನದಿ ಯಾವೂರು’ ಎಂದು ತಮಿಳರ ತೆಲುಗಿನಲ್ಲಿ ಕೇಳಿದ.

‘ಒಂದು ಊರೇನು, ಒಂದು ಹಳ್ಳಿಯೇನು ಸ್ವಾಮಿ ನಮ್ಮಂಥ ಬಡವರಿಗೆ. ತಮ್ಮಂಥ ದೊರೆಗಳಿಗೆ ಹೇಳಿಕೊಳ್ಳಲು ಊರುಗಳಿರುತ್ತವೆ. ದೊಡ್ಡ ದೊಡ್ಡ ಮನೆಗಳಿರುತ್ತವೆ ನಿಮಗೆ. ಗೇಟಿನ ಮುಂದೆ ಆಳುಗಳು